**ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ. ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

*****************************************************************************

**ಸೂಚನೆ:**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪುಕಲ್ಲು ಹಾಗೂ ಮರಳುಗಾರಿಕೆ ಸಂಪೂರ್ಣ ಸ್ಥಗಿತಗೊಂಡಿದ್ದು, ಇವುಗಳನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದ ಲಕ್ಷಾಂತರ ಕಾರ್ಮಿಕ ಕುಟುಂಬಗಳು ಬೀದಿಗೆ ಬಂದಿದ್ದಾರೆ. ಇದರಿಂದ ಜಿಲ್ಲೆಯು ಆರ್ಥಿಕತೆಯಿಂದ ಕುಂಠಿತಗೊಂಡಿರುತ್ತದೆ. ಕೆಂಪುಕಲ್ಲು ಮತ್ತು ಮರಳು ಇಲ್ಲದೆ ಕರಾವಳಿ ಭಾಗವಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ಕಾಮಗಾರಿ ನಡೆಯುತ್ತಿಲ್ಲ ಮತ್ತು ಪ್ರಮುಖ ಕಾಮಗಾರಿಗಳು ಸ್ಥಗಿತಗೊಂಡಿರುವುದರಿಂದ ಜಿಲ್ಲೆಯ ಆರ್ಥಿಕತೆ ವ್ಯವಸ್ಥೆಗೆ ದೊಡ್ಡ ರೀತಿಯ ಹೊಡೆತ ಬಿದ್ದಿದೆ ಎಂದು ವಿಜಯ ಕರ್ನಾಟಕ, ಉದಯವಾಣಿ ಮತ್ತು ವಾರ್ತಾ ಭಾರತಿ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿ ಇದರೊಂದಿಗೆ ಲಗತ್ತಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಜನಪರ ಕಾಮಗಾರಿಗಳಿಗೆ ಕೆಂಪುಕಲ್ಲು ಮತ್ತು ಮರಳು ಅತ್ಯಂತ ಪ್ರಮುಖ ವಸ್ತುವಾಗಿದೆ. ರಾಜ್ಯ ಸರ್ಕಾರ ಹೊಸ ಮರಳು ಸಾಗಾಣಿಕೆ ನೀತಿಯಿಂದ ಸಂಪೂರ್ಣ ಸ್ಥಗಿತಗೊಂಡು ಇದನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಕೇರಳದಲ್ಲಿ 1ಟನ್ ಕಲ್ಲಿಗೆ ಕೇವಲ 32 ರೂ.ಗಳಷ್ಟು ರಾಜಧನ ನಿಗಧಿಯಾಗಿದ್ದರೆ ಅದೇ ಪ್ರಮಾಣದ ಕಲ್ಲಿಗೆ ಕರ್ನಾಟಕದಲ್ಲಿ 290 ರೂ. ನಿಗಧಿಪಡಿಸಿರುವುದು ಅತ್ಯಂತ ಖೇದಕರ. 1 ಟನ್ ಮರ ಇಟ್ಟಿಗೆಗೆ ಶೇ.96 ನಿಗಧಿಪಡಿಸಿದ್ದು, ಇದನ್ನು ಶೇ.10 ಗೆ ನಿಗಧಿಗೊಳಿಸಬೇಕು. ಹಾಗೇಯೇ ಕರಾವಳಿ ಜಿಲ್ಲೆಗಳಿಗೆ ಪ್ರತ್ಯೇಕ ಮರಳು ನೀತಿಯನ್ನು ತಕ್ಷಣ ಜಾರಿಗೆ ತರಬೇಕು. ಸರಳೀಕೃತ ವ್ಯವಸ್ಥೆಯಲ್ಲಿ ಮರಳುಗಾರಿಕೆಗೆ ಜಾರಿಗೊಳಿಸಬೇಕು. ಹಳ್ಳ ಹಾಗೂ ಸಾಗಾಟಕ್ಕೆ ಕಾನೂನು ತೊರೆ, ತೋಡು, ನದಿ ಮತ್ತು ಹೊಳೆಗಳಲ್ಲಿ ಪ್ರಾಕೃತಿಕವಾಗಿ ಲಭ್ಯವಾಗುವ ಮರಳನ್ನು ತೆಗೆದು ಸಾಗಿಸಿ ಕಟ್ಟಡ ನಿರ್ಮಾಣಕ್ಕೆ ಬಳಸಲು ಪರವಾನಿಗೆ ನೀಡುವುದನ್ನು ಸ್ಥಳೀಯಾಡಳಿತಗಳಿಗೆ ಅವಕಾಶ ಕಲ್ಪಿಸಬೇಕು ಮತ್ತು ಈ ಎಲ್ಲಾ ತಾರತಮ್ಯವನ್ನು ಸರಿಪಡಿಸಿ ಜಿಲ್ಲೆಗೆ ಹೊಸ ನೀತಿಯನ್ನು ಜಾರಿಗೊಳಿಸಬೇಕೆಂದು ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳ ಆಗ್ರಹವಾಗಿರುವುದರಿಂದ, ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:**

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೆಂಪು ಕಲ್ಲು ಮತ್ತು ಮರಳಿನ ಪೂರೈಕೆಗಾಗಿ, ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

- ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿ ಖಾಸಗಿ / ಪಟ್ಟಾ ಜಮೀನುಗಳಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 32 ಮತ್ತು 3-A(a), 3-A(b) ರಡಿ ಕೆಂಪು ಕಲ್ಲು ಗಣಿಗಾರಿಕೆ ನೀಡಲಾಗಿರುವ ಲೈಸನ್ಸ್/ ಗುತ್ತಿಗೆ /ಕಾರ್ಯಾದೇಶಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ | ಜಿಲ್ಲೆ | ಲೈಸೆನ್ಸ್ ಗಳ ಸಂಖ್ಯೆ | ಕಾರ್ಯಾದೇಶಗಳ ಸಂಖ್ಯೆ | 2024-25ನೇ ಸಾಲಿನಲ್ಲಿ ಸಾಗಾಣಿಕೆಯಾಗಿರುವ ಪ್ರಮಾಣ (ಮೆ.ಟನ್ ಗಳಲ್ಲಿ) | 2025-26ನೇ ಸಾಲಿನಲ್ಲಿ ಸಾಗಾಣಿಕೆಯಾಗಿರುವ ಪ್ರಮಾಣ (ಮೆ.ಟನ್ ಗಳಲ್ಲಿ) |
|---|---|---|---|---|---|
| 1 | ದಕ್ಷಿಣ ಕನ್ನಡ | 19 | 11 | 1,24,198 | 521571 |
| 2 | ಉಡುಪಿ | 2 | 24 | 21,503 | 24,543 |
| 3 | ಉತ್ತರ ಕನ್ನಡ | 0 | 0 | 0 | 0 |

- ಕೆಂಪುಕಲ್ಲು ಸಾಗಾಣಿಕೆಗೆ ಸಂಬಂಧಪಟ್ಟಂತೆ ವಿಧಿಸಲಾಗುತ್ತಿರುವ ರಾಜಧನದ ವಿವರಗಳು ಈ ಕೆಳಕಂಡಂತಿವೆ:-

  1. ಪಟ್ಟಾ ಜಮೀನುಗಳಲ್ಲಿ ನಿಯಮ 32 ರಡಿ ಲೈಸೆನ್ಸ್ ಪಡೆದ ಪರವಾನಗಿದಾರರಿಂದ ಕೆಂಪುಕಲ್ಲಿಗೆ (ಲ್ಯಾಟರೈಟ್ ಬ್ರಿಕ್ಸ್) ಪ್ರತಿ ಮೆಟ್ರಿಕ್ ಟನ್ ಕೆಂಪು ಕಲ್ಲಿಗೆ ₹70/- ರಾಜಧನ ಹಾಗೂ ಡಿಎಂಎಫ್‌ನಿಧಿ ಮೊತ್ತ ₹21/- ನ್ನು ವಿಧಿಸಲಾಗುತ್ತಿದೆ.
  2. ಲೈಸೆನ್ಸ್ ಪಡೆದ ಪರವಾನಗಿದಾರರು ಕೆಂಪು ಕಲ್ಲು ಉಪಖನಿಜವನ್ನು **dispatched for use in cement or chemical industries or abrasive or refractory purpose (below threshold value as specified by IBM from time to time)** ಗೆ ಸಾಗಾಣಿಕೆ ಮಾಡಿದಲ್ಲಿ ₹200/- ರಾಜಧನ ಮತ್ತು ಡಿಎಂಎಫ್ ನಿಧಿ ಮೊತ್ತ ₹60/-ಗಳನ್ನು ವಿಧಿಸಲಾಗುತ್ತಿದೆ.
  3. ನಿಯಮ 3-A(a)ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್‌ಗೆ ರಾಜಧನ ₹70/-, ಹೆಚ್ಚುವರಿ ಪಾವತಿ ₹28/- ಮತ್ತು ಡಿಎಂಎಫ್ ನಿಧಿ ಮೊತ್ತ ₹7/- ನ್ನು ವಿಧಿಸಲಾಗುತ್ತಿದೆ.
  4. ನಿಯಮ 3-A(b) ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್‌ಗೆ ರಾಜಧನ ₹70/-, ಡಿಎಂಎಫ್ ನಿಧಿ ಮೊತ್ತ ₹21/- ಮತ್ತು ಷೆಡ್ಯೂಲ್ II-D ಮೊತ್ತ ₹150/- ಗಳನ್ನು ವಿಧಿಸಲಾಗುತ್ತಿದೆ.
  5. ಕೆಂಪು ಕಲ್ಲು ಉಪಖನಿಜದ ಬಳಕೆಗೆ ಅನುಗುಣವಾಗಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ನಿಗದಿಪಡಿಸಲಾಗಿರುತ್ತದೆ.

- ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆ ವ್ಯಾಪ್ತಿಯ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non-CRZ) ಪ್ರದೇಶಗಳ ನದಿಪಾತ್ರಗಳ ವ್ಯಾಪ್ತಿಯಲ್ಲಿ ಮಂಜೂರು ಮಾಡಿರುವ ಮರಳು ಗಣಿ ಗುತ್ತಿಗೆಗಳ ವಿವರ ಕೆಳಕಂಡಂತಿವೆ:

| ಕ್ರ.ಸಂ | ಜಿಲ್ಲೆ | 2024-25ನೇ ಸಾಲಿನಲ್ಲಿ ಮರಳು ಗಣಿ ಗುತ್ತಿಗೆಗಳ ಸಂಖ್ಯೆ | 2025-26ನೇ ಸಾಲಿನಲ್ಲಿ ಮರಳು ಗಣಿ ಗುತ್ತಿಗೆಗಳ ಸಂಖ್ಯೆ | 2024-25ನೇ ಸಾಲಿನಲ್ಲಿ ಸಾಗಾಣಿಕೆಯಾಗಿರುವ ಪ್ರಮಾಣ (ಮೆ.ಟನ್ ಗಳಲ್ಲಿ) | 2025-26ನೇ ಸಾಲಿನಲ್ಲಿ ಸಾಗಾಣಿಕೆಯಾಗಿರುವ ಪ್ರಮಾಣ (ಮೆ.ಟನ್ ಗಳಲ್ಲಿ) |
|---|---|---|---|---|---|
| 1 | ದಕ್ಷಿಣ ಕನ್ನಡ | 32 | 19 | 74,846 | 34,805 |
| 2 | ಉಡುಪಿ | 13 | 14 | 1,02,590 | 1,00,718 |
| 3 | ಉತ್ತರ ಕನ್ನಡ | 0 | 0 | 0 | 0 |

- ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಟ್ಟಡ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಿಂದ ಕಲ್ಲುನ್ನು ತೆಗೆದು ಕ್ರಷರ್ ಘಟಕಗಳಲ್ಲಿ ಉತ್ಪಾದಿತ (ಎಂ-ಸ್ಯಾಂಡ್) ಮರಳು ಸಾಗಾಣಿಕೆ ಮಾಡಿರುವ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ :-

| ಕ್ರ.ಸಂ | ಜಿಲ್ಲೆ | ಎಂ-ಸ್ಯಾಂಡ್ ಉತ್ಪಾದಿಸುವ ಕ್ರಷರ್ ಘಟಕಗಳ ಸಂಖ್ಯೆ | 2024-25ನೇ ಸಾಲಿನ ಸಾಗಾಣಿಕೆ ಪ್ರಮಾಣ (ಮೆ.ಟನ್ ಗಳಲ್ಲಿ) | 2025-26ನೇ ಸಾಲಿನ ಸಾಗಾಣಿಕೆ ಪ್ರಮಾಣ (ಮೆ.ಟನ್ ಗಳಲ್ಲಿ) |
|---|---|---|---|---|
| 1 | ದಕ್ಷಿಣ ಕನ್ನಡ | 16 | 1,16,741 | 1,34,706 |
| 2 | ಉಡುಪಿ | 27 | 3,06,508 | 1,27,352 |
| 3 | ಉತ್ತರ ಕನ್ನಡ | 17 | 62,932 | 49,964 |

- ಕರಾವಳಿ ನಿಯಂತ್ರಣ ವಲಯ (CRZ)ದ ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ 19 ಸ್ಯಾಂಡ್ ಬಾರ್ (Sand Bar) ಗಳಿಂದ 2024-25ನೇ ಸಾಲಿನಲ್ಲಿ 2,12,884 ಮೆಟ್ರಿಕ್ ಮರಳನ್ನು ತೆಗೆದು ಜಿಲ್ಲೆಯ ಸರ್ಕಾರಿ ಹಾಗೂ ಸಾರ್ವಜನಿಕ ಕಾಮಗಾರಿಗಳಿಗೆ ಪೂರೈಕೆ ಮಾಡಲಾಗಿರುತ್ತದೆ.

ಕರಾವಳಿ ಜಿಲ್ಲೆಗಳಿಗೆ ಹೊಸ ನೀತಿಯ ಬಗ್ಗೆ :-

- ರಾಜ್ಯ ಸರ್ಕಾರವು ದಿನಾಂಕ 01-12-2021 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು – 2021 ನ್ನು ಜಾರಿಗೊಳಿಸಲಾಗಿರುತ್ತದೆ.
- ಸದರಿ ತಿದ್ದುಪಡಿ ನಿಯಮ-31-ZA ರಲ್ಲಿ ಕೇಂದ್ರ ಪರಿಸರ ಮತ್ತು ಹವಾಮಾನ ಬದಲಾಣೆ ಮಂತ್ರಾಲಯದ O.M ಸಂಖ್ಯೆ:11-83/2005-IA-III (Vol-III) ದಿನಾಂಕ:08.11.2011ರ ಆದೇಶದಂತೆ, ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ(CRZ) ಪ್ರದೇಶಗಳಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯದವರಿಗೆ ಅವಕಾಶ ನೀಡಿ ನಿಯಮ ರೂಪಿಸಲಾಗಿರುತ್ತದೆ.
- ತಿದ್ದುಪಡಿ ನಿಯಮ 31-ZB ರಲ್ಲಿ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non-CRZ) ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಗುರುತಿಸುವ ಮರಳು ಬ್ಲಾಕ್ ಗಳನ್ನು ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ಸಮುದಾಯದವರಿಗೆ ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.
- ಮುಂದುವರೆದು, ಸರ್ಕಾರವು ದಿನಾಂಕ:17.03.2023ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ನ್ನು ಜಾರಿಗೆ ತಂದಿದ್ದು, ತಿದ್ದುಪಡಿ ನಿಯಮ-31-ZB(3)ರಲ್ಲಿ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non-CRZ) ಕಿಂಡಿ ಅಣೆಕಟ್ಟು ಪ್ರದೇಶಗಳಲ್ಲಿ ಹೂಳಿನೊಂದಿಗೆ ದೊರೆಯುವ ಮರಳನ್ನು ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ಸಮುದಾಯದವರಿಗೆ ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.
- ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸುವ ಸಂಬಂಧ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 08.05.2023 ರಂದು ಕರಡು ಮಾರ್ಗಸೂಚಿ ಗಳನ್ನು ಹೊರಡಿಸಿದೆ. ಸದರಿ ಕರಡು ಮಾರ್ಗಸೂಚಿಗಳಿಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಕರಡು ಮಾರ್ಗ ಸೂಚಿಗಳನ್ನು ಭಾರತ ಸರ್ಕಾರದಿಂದ ಅಂತಿಮಗೊಳಿಸಿ, ಅಧಿಸೂಚನೆ ಜಾರಿಯಾದ ನಂತರ ಜಿಲ್ಲಾ ಸಮಿತಿಯು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸುತ್ತದೆ.
- ಕರಾವಳಿ ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯದವರಿಗೆ ಜಿಲ್ಲಾ ವ್ಯಾಪ್ತಿಯ ಮರಳು ತೆಗೆಯುವ ಎಲ್ಲಾ ಮೂಲಗಳಾದ ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ, ಕಿಂಡಿ ಅಣೆಕಟ್ಟು ಪ್ರದೇಶಗಳಲ್ಲಿ ಮತ್ತು ಕರಾವಳಿ ನಿಯಂತ್ರಣ ವಲಯದ ನದಿ ಪಾತ್ರದ ಮರಳು ದಿಬ್ಬಗಳಲ್ಲಿ ದೊರೆಯುವ ಮರಳನ್ನು ತೆಗೆದು ವಿಲೇವಾರಿ ಮಾಡಲು ಅವಕಾಶವನ್ನು ನೀಡಿದ್ದು, ಕರಾವಳಿ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಮರಳು ನೀತಿ ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ ಸಿಐ -ಎಂಎಂಎನ್/212/2025

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.